**CENTRAL BOARD OF SECONDARY EDUCATION**

**CODE NO: 115**

**CLASS XII KANNADA**

**MODEL QUESTION PAPER**

**TERM – II**

**ONE PAPER** **TIME: 02HRS** **M.MARKS : 40**

**ತರಗತಿ :12** **ಸಿಬಿಎಸ್ಇ** **ವಿಷಯ : ಕನ್ನಡ**

**ಮಾದರಿ ಉತ್ತರ ಪತ್ರಿಕೆ**

**ಒಂದು ಪತ್ರಿಕೆ** **ಸಮಯ : 02ಗಂಟೆ** **ಅಂಕಗಳು : 40**

| ಪ್ರ.ಸಂ | ಉತ್ತರಗಳು | ಅಂಕಗಳು | ಒಟ್ಟು |
|---|---|---|---|
| 1 | ಅ) ಬೆಳೆ ವೈವಿಧ್ಯವು ಕುಟುಂಬದ ಆಹಾರದ ಅಗತ್ಯಗಳನ್ನು ಪೌಷ್ಠಿಕಾಂಶಗಳನ್ನು ಪೂರೈಸುತ್ತವೆ. ಕೃಷಿ ಭೂಮಿಯ ಫಲವತ್ತತೆಯನ್ನು ಸುತ್ತಲಿನ ಪರಿಸರವನ್ನು ರಕ್ಷಿಸುತ್ತದೆ. ಕೆಲವು ಉಪಬೆಳೆಗಳ ಎಲೆ ಕಡ್ಡಿಗಳೂ ನೆಲಕ್ಕೆ ಸಾರ ಒದಗಿಸುತ್ತವೆ. ಮತ್ತೆ ಕೆಲವು ಉಪ ಬೆಳೆಗಳು ಪ್ರಧಾನ ಬೆಳೆಗಳಿಗೆ ಬರುವ ನುಸಿಗಳನ್ನು ನಿಯಂತ್ರಿಸುತ್ತವೆ. ಕೆಲವು ಉಪಬೆಳೆಗಳ ಬೇರುಗಳು ಮಣ್ಣನ್ನು ಸಡಿಲಗೊಳಿಸಿ ನೀರು ಹಿಂಗುವಿಕೆಗೂ ನೆರವಾಗುತ್ತವೆ.(ಯಾವುದಾರೂ ಮೂರು ಅಂಶಗಳನ್ನು ಗಮನಿಸಬಹುದು)<br>ಅ). ಬೀಜಗಳಿಗೆ ಹುಳು ಬೀಳದಂತೆ,ಬೂಷ್ಟು ಹಿಡಿಯದಂತೆ ಮಾಡಲು ಮಣ್ಣು ಮತ್ತುತ್ತಾರೆ, ಬೇವಿನ ಸೊಪ್ಪು ಅಥವಾ ಲಕ್ಕಿ ಸೊಪ್ಪಿನ ಜೊತೆ ಇಡುತ್ತಾರೆ. ಮಹಿಳೆಯರ ಬೀಜ ಸಂರಕ್ಷಣೆಯಲ್ಲಿ ರಾಸಾಯನಿಕಗಳಿಗೆ ಜಾಗವಿಲ್ಲ. ಈ ಬೀಜ ಸಂರಕ್ಷಣೆಯ ವಿಧಾನಗಳು ಪರಿಸರ ಸ್ನೇಹಿಯಾದ ಕಾರಣ ಅವುಗಳಗೆ ಜಾಗ ಅಡುಗೆ ಮನೆಗಳಲ್ಲಿ, ಕುಡಿಕೆ – ಮಡಿಕೆಗಳಲ್ಲಿ,ಜಂತಿಗೆ ತೂಗು ಬಿಟ್ಟ ಬಟ್ಟೆಯ ಪುಟ್ಟ ಗಂಟುಗಳಲ್ಲಿ, ಒಲೆಯ ಮೇಲಿನ ಮರದ ಕಟ್ಟೆಯಲ್ಲಿ,ಹೊಗೆಯ ಗೂಡುಗಳಲ್ಲಿ. (ಯಾವುದಾರೂ ಮೂರು ಅಂಶಗಳನ್ನು ಗಮನಿಸಬಹುದು) | 2<br><br>2 | 4 |
| 2 | ಅ) ನಿಷೇಧಾರ್ಥಕ ವಾಕ್ಯ...... ನಾಳೆಯ ದಿನ ನಾನು ಪಾಠಶಾಲೆಗೆ ಹೋಗುವೆನು. | 1 + 1 | 2 |
| 3 | ಗಾದೆಯ ಒಳಾರ್ಥ<br>ವಿವರಣೆ | 1<br>1 | 2 |
| 4 | -U !-UU !UUU ! –UU 3!4!3!4 ಪ್ರಸ್ತಾರ<br>-U ! UU- ! UUU ! UUUU 3!4!3!4 ಗಣವಿಂಗಡಣೆ<br>-U ! UUUU ! –U ! –UU ! –U ! –UU ! – 3!4!3!4!3!4!- ಛಂದಸ್ಸು<br>ಭಾಮಿನಿ ಷಟ್ಪದಿ<br><br>ಅಥವ | 1<br>½<br>½ | 2 |

| | | | |
|---|---|---|---|
| | UU-! –UU! UU- 4!4!4<br>U-U ! – - ! U –U ! U !-- 4!4!4!4!4<br>ಕಂದ ಪದ್ಯ | 1<br>½<br>½ | |
| 5 | ಅ). ಮೂಕ ಜೀವಿಗಳಾದ ದನಕರುಗಳು ತಿನ್ನಲು ಮೇವಿಲ್ಲದೆ ಸಾಯುತ್ತಿವೆ.ಬಡತನ ಜನರನ್ನು ಕಿತ್ತು ತಿನ್ನುತ್ತಿದೆ. ಕುಡಿಯಲು ನೀರಾಗಲಿ,ಗಂಜಿಯಾಗಲಿ ಗತಿಯಿಲ್ಲದ ಜನ ಹೊಟ್ಟೆತುಂಬಿಸಿಕೊಳ್ಳಲು ಸತ್ತ ದನಗಳನ್ನು ಕಿತ್ತು ಕಿತ್ತು ತಿನ್ನುತ್ತಿರುವುದನ್ನು ಕಂಡು ಕವಯತ್ರಿ ಅಗ್ನಿಪರ್ವತವಾಗಿದ್ದಾರೆ.<br>ಆ). ಯಾರೂ ಸಹಾಯಹಸ್ತ ಚಾಚದಿದ್ದಾಗ ತಮ್ಮ ಕಣ್ಣೀರಿನ ಲಾವಾರಸದಲ್ಲಿ ವಿಶ್ವವನ್ನೇ ಮುಳುಗಿಸಬೇಕೆಂಬ, ಜಗತ್ತನ್ನೇ ಸರ್ವನಾಶ ನಾಶ ಮಾಡಬೇಕೆಂಬ ಛಲ ಮೂಡುತ್ತದೆ. ಬೆಂಕಿ ನಾಲಿಗೆಯನ್ನು ಚಾಚಿ ತಮ್ಮವರು ಅನುಭವಿಸುತ್ತಿರುವ ದಾರಿದ್ರ್ಯವನ್ನೇ ನುಂಗಿ ನೊಣೆಯಬೇಕೆಂಬ ಭಾವ ಮೂಡುತ್ತದೆ. | 2<br>2 | 4 |
| 6 | ಅ). ಬಿಸಿಲಲ್ಲಿ ಬಳಲಿ ಬಂದವರಿಗೆ ನೆರಳು ನೀಡುವುದಿಲ್ಲ.ಹಸಿದು ಬಂದವರಿಗೆ ಹಣ್ಣು ನೀಡಿ ಸಲಹುವುದಿಲ್ಲ.ಹೂಬಿಟ್ಟು ಪರಿಮಳ ಹರಡುವುದಿಲ್ಲ.ಮರದ ಕೆಳಗೆ ಕುಳಿತುಕೊಳ್ಳಲು ಸಾಧ್ಯವಿಲ್ಲ. ಜಾಲಿಯ ಮರದ ರಸವೋ ವಿಷದಂತೆ ಕಹಿಯಾಗಿದ್ದು ಆಸ್ವಾದಿಸಲು ಸಾಧ್ಯವಿಲ್ಲ.<br>ಬ). "ನನ್ನ ಬದುಕು ಯಾರೊಬ್ಬರಿಗೆ ಅನುಕರಣೆ ಯೋಗ್ಯವಾದ ಮಾದರಿಯಾಗುತ್ತದೆಂಬ ಭ್ರಮೆ ನನಗಿಲ್ಲ.ಯಾವುದೋ ಮೂಲೆಯಲ್ಲಿನ ಊರಿನಲ್ಲಿ ಹುಟ್ಟಿ,ಸಾಮಾಜಿಕವಾಗಿ ಸೌಲಭ್ಯಗಳಿಂದ ವಂಚಿತವಾಗಿರುವ ಮಗುವಿಗೆ ಅದರಂಥದೆ ಪರಿಸರದಲ್ಲಿದ್ದ ನನ್ನ ಭವಿಷ್ಯ ಅರಳಿದ್ದನ್ನು ಓದಿದಾಗ ಭರವಸೆ ಮೂಡಬಹುದು. ಅಂತಹ ಮಕ್ಕಳಿಗೆ,ತಾವು ಹಿಂದುಳಿದವರು, ಅಸಮರ್ಥರು ಅನ್ನುವ ಭ್ರಮೆಯಿಂದ ಬಿಡುಗಡೆ ಹೊಂದಲು ನನ್ನ ಬದುಕು ಸ್ಫೂರ್ತಿ ನೀಡಬಹುದೇನೋ"<br>ಅಥವ<br>ಮನೋರಮೆಯು ಅರಮನೆಯಿಂದ ಬಂದ ಮುದ್ದಣನಿಗೆ ಕಾಲು ತೊಳೆಯಲು ನೀರು ಕೊಟ್ಟು, ಕೈಹಿಡಿದು ಚೌಕಿಗೆ ಕರೆತಂದು ಮಣೆ ಹಾಕಿ ಕುಳ್ಳಿರಿಸಿದಳು. ರಸಭರಿತ ಹಣ್ಣುಗಳನ್ನು, ಕೆನೆಭರಿತ ಹಾಲನ್ನು ಮತ್ತು ಮೆಲ್ಲಲು ರಸಗವಳ ನೀಡಿ ಉಪಚರಿಸಿದಳು.<br>ಇ).ಕೃಷ್ಣೆಗೌಡನ ಆನೆ ಗೌರಿಯು ಹುಟ್ಟಿ ಬೆಳೆದದ್ದು ಎಲ್ಲ ಊರಿನ ಜನಗಳ ನಡುವೆಯೇ.ಹಾಗಾಗಿ ಅದಕ್ಕೆ ಕಾಡಿನ ಬಗ್ಗೆಯಾಗಲಿ, ಕಾಡಿನಲ್ಲಿರುವ ಇತರೆ ಕಾಡಾನೆಗಳ ಬಗ್ಗೆಯಾಗಲಿ ಏನೂ ತಿಳುವಳಿಕೆ ಇರಲಿಲ್ಲ. | 2<br>2<br>2 | 6 |
| 7 | ಅ). ಕಲಿ ಭೀಮನೇ ಮಿಡುಕುಳ್ಳ ಗಂಡನು<br>ಈ ವಾಕ್ಯವನ್ನು ಕುಮಾರವ್ಯಾಸನು ರಚಿಸಿರುವ 'ಕರ್ನಾಟ ಭಾರತ ಕಥಾಮಂಜರಿ' ಯಿಂದಾಯ್ದ 'ಇನ್ನು ಹುಟ್ಟದೆಯಿರಲಿ ನಾರಿಯರೆನ್ನವೊಲು' ಎಂಬ ಕಾವ್ಯ ಭಾಗದಿಂದ ಆಯ್ದುಕೊಳ್ಳಲಾಗಿದೆ. ದ್ರೌಪದಿ ಮನದಲ್ಲಿ ಹೇಳಿಕೊಂಡದ್ದು.<br>ಕೀಚಕನ ಕಾಟವನ್ನು ನಿವಾರಿಸಲು ತನ್ನ ಪತಿಗಳಲ್ಲಿ ಯಾರು ಸಮರ್ಥರು ಎಂದು ತನ್ನಲ್ಲೇ ಚಿಂತಿಸುತ್ತಾಳೆ. ಐವರಲ್ಲಿ ಕಲಿಭೀಮನೇ ಪೌರುಷವಂತನಾದ ಗಂಡನು. ಅವನಿಂದ ಈ ತೊಂದರೆ ನಿವಾರಣೆಯಾಗಬಹುದು ಎಂಬ ಭರವಸೆ ಮೂಡುವ ಸಂದರ್ಭದಲ್ಲಿ ಈ | 1 ½<br>1 ½ | |

| | | | |
|---|---|---|---|
| | ವಾಕ್ಯ ಬಂದಿದೆ.<br><br>ಅಥವ<br><br>ಮನ್ನಿಸಲಿ ನಿಮ್ಮನ್ನ ಆ ದೇವರೆ!<br>ನಿಸಾರ್ ಅಹಮದ್ ಅವರ 'ಶಿಲುಬೆ ಏರಿದ್ದಾನೆ' ಕವಿತೆಯಿಂದ ಈ ವಾಕ್ಯವನ್ನು ಅಯ್ದುಕೊಳ್ಳಲಾಗಿದೆ. ಈ ಮಾತನ್ನು ಕವಿಯೇ ಹೇಳಿದ್ದಾರೆ.<br>ಕೊಲೆಗಡುಕ ಬರಬ್ಬನನ್ನು ಕ್ಷಮಿಸಿದ ರೋಮಿನ ಯಾಜಕರು ಏಸುವನ್ನು ಕ್ಷಮಿಸದೆ ಕಳ್ಳರಿಬ್ಬರೊಂದಿಗೆ ಗಲ್ಲಗೇರಿಸಲು ಅಗ್ರಹಿಸಿದರು. ಇದನ್ನು ನೆನೆದ ಕವಿಯು ನಿಮ್ಮ ದುಷ್ಟತನದ ಕೆಲಸವನ್ನು 'ಅ ದೇವರು ಕ್ಷಮಿಸಲಿ' ಎಂದಿದ್ದಾರೆ. | | 3 |
| | ಆ. ಕನ್ನಡ ಕತ್ತುರಿಯಲ್ತೆ<br>ಮುದ್ದಣನು ಬರೆದಿರುವ 'ಶ್ರೀ ರಾಮಾಶ್ವಮೇಧ' ದಿಂದ ಆಯ್ದ 'ತಿರುಳ್ಗನ್ನಡದ ಬೆಳ್ನುಡಿ' ಪಾಠದಿಂದ ಅರಿಸಿಕೊಳ್ಳಲಾಗಿದೆ. ಮನೋರಮೆಯು ಮುದ್ದಣನಿಗೆ ಹೇಳಿರುವ ಮಾತಿದು<br>ಮುದ್ದಣನು ಮನೋರಮೆಗೆ ಕಥೆ ಹೇಳಲೆಂದು "ಸ್ವಸ್ತೀ ಶ್ರೀಮತ್ಸುರಾಸುರೇಂದ್ರ ನರೇಂದ್ರ ಮುನೀಂದ್ರ........" ಎಂದು ಕ್ಲಿಷ್ಟವಾದ ಭಾಷೆಯನ್ನು ಪ್ರಯೋಗಿಸಿದಾಗ ಅದನ್ನು ತಡೆದ ಮನೋರಮೆಯು ಈ ಮೇಲಿನಂತೆ ಹೇಳಿದಳು. | 1 ½<br><br>1 ½ | 3 |
| 8 | ಮಠದ ಜಗದ್ಗುರುಗಳನ್ನು ಜನರು ಅಡ್ಡ ಪಲ್ಲಕ್ಕಿಯಲ್ಲಿ ತಮ್ಮ ಹೆಗಲ ಮೇಲೆ ಹೊರತೊಡಗಿದ್ದರಿಂದ ಆನೆಗೆ ಜಗದ್ಗುರುಗಳನ್ನು ಹೊರುವ ಕೆಲಸ ತಪ್ಪಿಹೋಗಿ ಅನೆಯನ್ನು ಸಾಕುವುದು ಮಠದವರಿಗೆ ನಿರುಪಯುಕ್ತವೆನ್ನಿಸಿತ್ತು. ಅಲ್ಲದೆ ಆನೆಯ ಮಾವುತ ದಿನದ ೨೪ ಗಂಟೆಯೂ ಕುಡಿದಿರುತ್ತಿದ್ದುದರಿಂದ ಆತ ಮಠದ ಸಾತ್ವಿಕ ವಾತಾವರಣಕ್ಕೆ ದೊಡ್ಡ ತಲೆನೋವಾಗಿದ್ದ....ಮಾವುತನನ್ನು ಮಠದಿಂದ ಓಡಿಸಿದಾಗ, ಆನೆ ಆತ ಹಿಂತಿರುಗಿ ಬರುವ ವರೆಗೆ ಊಟವನ್ನೇ ವರ್ಜಿಸಿತ್ತು.....ತನ್ನ ಅನಿವಾರ್ಯತೆಯನ್ನು ಅರಿತ ವೇಲಾಯುಧ ಮಠಕ್ಕೆ ಕಿರುಕುಳ ಕೊಡಲಾರಂಭಿಸಿದ.....ಆದ್ದರಿಂದ... ಆನೆ ಮತ್ತು ವೇಲಾಯುಧನನ್ನು ಸಾಗಹಾಕಲು ಮಠದವರು ಹವಣಿಸಿದದರು. | 4 | 4 |
| 9 | ವಿಷಯ ಸಂಗ್ರಹ<br>ವಾಕ್ಯ ಸಂಯೋಜನೆ<br>ಅಭಿವ್ಯಕ್ತಿ<br>ಶೈಲಿ | 1<br>1<br>2 | 4 |
| 10 | ಇಂದ ಮತ್ತು ಗೆ<br>ಒಡಲು<br>ವಿಷಯ ಸಂಯೋಜನೆ<br>ಮುಕ್ತಾಯ | 1<br>1<br>2 | 4 |
| 11 | ಕವಿಗಳ ಕಿರಿ ಪರೊಚಯ,ಸಾಹಿತ್ಯದಲ್ಲಿ ಸಾಧನೆ ಮತ್ತು ಪ್ರಶಸ್ತಿ ಪುರಸ್ಕಾರ/ ಬಿರುದು ಇತ್ಯಾದಿಗಳನ್ನು ಗಮನಿಸಿ ಅಂಕ ನೀಡುವುದು | 2 | 2 |
| | ಒಟ್ಟು ಅಂಕಗಳು | 40 | 40 |

$$$$$$$$$$$$$$$$